ಪ್ರಬಂಧ




**ಸ್ಮಿತಾ ಅಮೃತರಾಜ್**

ಕಲೆ: ಗುಜ್ಜಾರ್


# ಬಸ್ಸಿನೊಳಗೊಂದು ಲೋಕ

ನನಗೆ ಪ್ರಯಾಣವೆಂದರೆ ಎಲ್ಲಿಲ್ಲದ ಖುಷಿ. ಅದರಲ್ಲೂ ಸರ್ಕಾರಿ ಬಸ್ಸು ಮತ್ತು ರೈಲಿನ ಪ್ರಯಾಣ ಕೊಡುವ ಖುಷಿ ಬೇರೆಯದೇ. ನನ್ನೂರು ಕೊಡಗಿನಲ್ಲಿ ರೈಲುಮಾರ್ಗಗಳಿಲ್ಲ. ಅದಲ್ಲದೆ ನಾನೊಬ್ಬಳು ಕೃಷಿಕ ಮಹಿಳೆ ಆದ ಕಾರಣ ದೂರದ ಊರಿಗೆ ಹೋಗುವ ಅವಕಾಶಗಳು ಕೂಡ ತೀರಾ ಕಡಿಮೆ. ಏನಾದರೂ ಹತ್ರಪತ್ರ ಕಾರ್ಯಕ್ರಮಗಳಿದ್ದರೆ ಬಸ್ಸನ್ನೇ ನೆಚ್ಚಿಕೊಳ್ಳುವುದು.

ನಮ್ಮಂತಹ ಮಧ್ಯಮ ವರ್ಗದವರಿಗೆ ಬಸ್ಸು ಒಂದು ವರದಾನ. ಇಂತಿಷ್ಟು ಟಿಕೇಟು ಅಂತ ಕೊಟ್ಟರೆ ಮುಗಿಯಿತು. ಎಲ್ಲಿ ಬೇಕೋ ಅಲ್ಲಿಗೆ ಯಾವ ಕಿರಿಕಿರಿ ತಕರಾರುಗಳಿಲ್ಲದೆ ಕರೆದುಕೊಂಡು ಹೋಗುತ್ತದೆ. ಬಸ್ಸೆಂಬುದು ಸರ್ವಧರ್ಮ ಸಮನ್ವಯಕಾರನೂ, ಜಾತ್ಯತೀತನೂ, ಸಮಾನತೆಯ ಹರಿಕಾರನೂ ಹೌದು. ಬಸ್ಸು ಹತ್ತಿ, ಸೀಟು ಹಿಡಿದು ಕೂತ ಗಳಿಗೆಯಷ್ಟೂ ನಮ್ಮದು. ಮತ್ತು ನಾವೇ ಅದಕ್ಕೆ ಹಕ್ಕುದಾರರು. ನಮ್ಮಲ್ಲಿ ಬರುವ ಕೂಲಿಯಾಳುಗಳು ಕೂಡ ಯಜಮಾನ ಬಂದರೆ ಅಲ್ಲಿ ಸೀಟಿನಿಂದ ಎದ್ದು ನಿಲ್ಲುವುದಿಲ್ಲ. ಸ್ವಾತಂತ್ರ್ಯದ ಹರಿಕಾರನಾದ ಈ ಬಸ್ಸೊಂದು ಅನುಭವದ ಗೋದಾಮು.

ನಾನು ಎಂಟನೇ ತರಗತಿಯಿಂದ ಖಾಯಂ ಆಗಿ ಬಸ್ಸಿನ ಪ್ರಯಾಣ ಶುರು ಮಾಡಿದ್ದು. ಕುಳಿತುಕೊಳ್ಳಲು ಸೀಟು ಸಿಕ್ಕಿದ ದಿನಗಳು ಕಡಿಮೆ. ಕಾಲೂರಲು ಎಡೆ ಸಿಕ್ಕಿದರೇ ಅದುವೇ ದೊಡ್ಡ ಸೌಭಾಗ್ಯ. ಕೆಲವೊಮ್ಮೆ ಬಸ್ಸು ಡೋರು ಹಾಕಲಿಕ್ಕೂ ಸಾಧ್ಯವಾಗುತ್ತಿರಲಿಲ್ಲ. ಅಷ್ಟಿದ್ದರೂ ಮಕ್ಕಳಿಗೆ ನಿಲ್ಲಿಸದೆ ಮಾತ್ರ ಬಸ್ಸು ಮುಂದೆ ಹೋಗುತ್ತಿರಲಿಲ್ಲ. ಇನ್ನೆರಡು ಜನ ನಿಲ್ಲಬಹುದಾದ ಜಾಗೆಯನ್ನು ನಮ್ಮ ಹೆಗಲಿಗೆ ಕೋಸಿದ ಡಕ್ ಬ್ಯಾಕ್ ಬ್ಯಾಗ್ ನುಂಗಿಕೊಂಡು, ಅದನ್ನು ಹಿಂದೆ ಮುಂದೆ ನಿಂತ ಕೂತವರ ತಲೆಗೆ ಮುಖಕ್ಕೆ ಉಜ್ಜಿಸಿಕೊಂಡು, ಇತರರಿಂದ ಉಗಿಸಿಕೊಂಡು ಹೇಗೆ ಸ್ಥಳ ಒತ್ತರಿಸಿ ಕೊಂಡು ಹೋಗುತ್ತಿದ್ದೆವೋ ದೇವರೇ ಬಲ್ಲ. ಯಾವತ್ತಾದರೂ ಒಂದೊಂದು ದಿನ ಸೀಟು ಸಿಕ್ಕಿದರೆ ಪರಮಾನಂದ. ಅದೇ ಹೊತ್ತಿಗೆ ಬಯಲಾಜಿ ಟೀಚರ್ ಬಸ್ಸು ಹತ್ತಿದರೆ ಮಾತ್ರ ಏಳದೆ ಬೇರೆ ವಿಧಿಯಿರುತ್ತಿರಲಿಲ್ಲ. ಅವರನ್ನು ನನ್ನ ಸೀಟಿನಲ್ಲಿ ಕುಳ್ಳಿರಿಸಿ, ನನ್ನ ಬ್ಯಾಗನ್ನು ಅವರ ತೊಡೆ ಮೇಲೆ ಕುಕ್ಕಿ ವಿಧೇಯ ವಿದ್ಯಾರ್ಥಿನಿಯಂತೆ ಬಸ್ಸಿನ ಕಂಬಕ್ಕೊರಗಿ ನನ್ನ ವಿಧಿಯ ಹಳಿಯುತ್ತಾ ನಿಲ್ಲಬೇಕಾಗುತ್ತಿತ್ತು.

ನಮ್ಮೂರಿನ ಮಾರ್ಗವಾಗಿ ಬರೇ ಪ್ರೈವೇಟ್ ಬಸ್ಸು ಮಾತ್ರ ಹೋಗುವ ಕಾರಣ ಪಾಸ್ ವ್ಯವಸ್ಥೆ ಆಗುತ್ತಿರಲಿಲ್ಲ. ಟಿಕೇಟಿಗೆ ಒಂದು ರೂಪಾಯಿ. ಆ ಕಿಕ್ಕಿರಿದ ಬಸ್ಸಿನ ನಡುವೆ ಕಂಡಕ್ಟರ್ ಹೇಗೆ ನುಸುಳಿಕೊಂಡು ಬಂದು ಟಿಕೇಟು ವಸೂಲಿ ಮಾಡುತ್ತಿದ್ದನೋ ದೇವನೇ ಬಲ್ಲ. ನನ್ನ ಮನೆ ದಕ್ಷಿಣ ಕನ್ನಡದ ಒಂದು ರಕ್ಷಿತಾರಣ್ಯದ ಅಂಚಿನಲ್ಲಿ. ಹಾಗಾಗಿ, ಶಾಲೆ ಕಲಿಯಲೋಸುಗ ನಾನು ಮಡಿಕೇರಿಯ ಹಳ್ಳಿಯೊಂದರಲ್ಲಿದ್ದ ಅಜ್ಜಿ ಮನೆ ಸೇರಿದ್ದೆ. ನನ್ನ ಬಸ್ಸು ಕಡಿದಾದ ಬೆಟ್ಟದ ಅಂಚಿನ